International Journal of Kannada Research
www.kannadajournal.com

ISSN: 2454–5813
IJKR 2017; 3(4): 97-100
© 2017 IJKR
www.kannadajournal.com
Received: 14-08-2017
Accepted: 17-09-2017

**ಮೋಹನ್ ಕುಮಾರ್ ಎಂ.ಜೆ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು ವಿ.ವಿ, ಬೆಂಗಳೂರು

**Correspondence**
**ಮೋಹನ್ ಕುಮಾರ್ ಎಂ.ಜೆ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು ವಿ.ವಿ, ಬೆಂಗಳೂರು

# ಕಂಬಾರ ಮತ್ತು ಬ್ರೆಕ್ಟ್‌ರ ನಾಟಕಗಳಲ್ಲಿ ವೇಶ್ಯೆಯರ ಪಾತ್ರಚಿತ್ರಣ: ತೌಲನಿಕ ನೋಟ

**ಮೋಹನ್ ಕುಮಾರ್ ಎಂ.ಜೆ. ಸಂಶೋಧನಾ ವಿದ್ಯಾರ್ಥಿ**

ಸಮೃದ್ಧ, ಸಂತೃಪ್ತ, ವರ್ಗರಹಿತ ಹಾಗೂ ಸಮಾನತೆಯ ಸಮಾಜ ಎಲ್ಲರ ಆಶಯ. ಆದರೆ ಈ ಅಸಮಾನ ಜಗತ್ತಿನಲ್ಲಿ ಸಮಾನತೆಯ, ಸಂತೃಪ್ತ ಬದುಕಿನ ಕನಸು ಹಲವರಿಗೆ ಕನಸಾಗಿಯೇ ಉಳಿದಿದೆ. ಭಾರತ, ಯುರೋಪ್ ಒಳಗೊಂಡಂತೆ ಇಡೀ ವಿಶ್ವದಲ್ಲಿಯೇ ಈ ಬಗೆಯ ಅಸಮಾನತೆಯ ಅಸಹನೆಗಳನ್ನು ನಾವು ಗುರುತಿಸಬಹುದಾಗಿದೆ. ಅಸಮಾನತೆ ಎಂಬುದು ಇಂದು ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಕಂಡುಬರುತ್ತಿದೆ. ಆರ್ಥಿಕ ಅಸಮಾನತೆ, ಶೈಕ್ಷಣಿಕ ಅಸಮಾನತೆ, ಲಿಂಗ ಅಸಮಾನತೆ, ಸಾಮಾಜಿಕ ಅಸಮಾನತೆ ಹೀಗೆ ಅಸಮಾನತೆ ಎಂಬುದು ಸಮಾಜದಲ್ಲಿ ಸರ್ವವ್ಯಾಪಿಯಾಗಿದೆ. ಇದರಿಂದಾಗಿ ಜನರು ಹಲವು ಬಗೆಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಅದರಲ್ಲೂ ಲಿಂಗ ಅಸಮಾನತೆ ಎಂಬುದು ಜಗತ್ತಿನ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಸ್ತ್ರೀಯರನ್ನು ಒಂದಲ್ಲ ಒಂದು ರೀತಿಯಲ್ಲಿ ಶೋಷಿಸುತ್ತಿದೆ. ಸಮಾಜದಲ್ಲಿ ಸ್ತ್ರೀ ಎರಡನೇ ದರ್ಜೆಯ ಪ್ರಜೆಯಾಗಿ ಗುರುತಿಸಲ್ಪಡುತ್ತಿದ್ದಾಳೆ. ಇದರ ವಿರುದ್ಧ ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ಸಮಾನತೆ, ಸ್ತ್ರೀ ಸಬಲೀಕರಣ, ಸ್ತ್ರೀವಾದಿ ಹೋರಾಟ, ಸ್ತ್ರೀವಾದಿ ಚಿಂತನೆ ಎಂಬ ಹೆಸರಿನಲ್ಲಿ ಅನೇಕ ಜಾಗೃತಿ ಚಳುವಳಿಗಳು ಹಾಗೂ ಹೋರಾಟಗಳು ಹುಟ್ಟಿಕೊಂಡಿವೆ. ಆದರೂ ಸ್ತ್ರೀ ಇಂದಿಗೂ ಪೂರ್ಣ ಸ್ವಾತಂತ್ರ್ಯ ಹಾಗೂ ಸಮಾನತೆಯಿಂದ ವಂಚಿತಳಾಗಿದ್ದಾಳೆ. ಇದರ ಜೊತೆಗೆ ಪುರುಷ ಪ್ರಧಾನ ಸಮಾಜ ಸ್ತ್ರೀಯನ್ನು ವೇಶ್ಯೆ, ದೇವದಾಸಿ, ಲೈಂಗಿಕ ಕಾರ್ಯಕರ್ತೆ ಎಂಬ ಹೆಸರಿನಲ್ಲಿ ಶೋಷಿಸುತ್ತಾ ಒಂದು ಬಗೆಯ ಶೋಷಿತವರ್ಗವನ್ನೇ ಹುಟ್ಟುಹಾಕಿರುವುದನ್ನು ನಾವು ಕಾಣುತ್ತಿದ್ದೇವೆ.

ವೇಶ್ಯಾವೃತ್ತಿ ಎಂಬುದು ನಮ್ಮ ಸಮಾಜದಲ್ಲಿ ಬಹಳ ಹಿಂದಿನಿಂದಲೂ ಕಂಡುಬರುತ್ತಿರುವ ಒಂದು ಸಾಮಾಜಿಕ ಅನಿಷ್ಟ ಪದ್ಧತಿಯಾಗಿದೆ. ಜನರ ನೈತಿಕ ಜೀವನಕ್ಕೆ ಅಪವಾದದಂತಿರುವ ಈ ಪದ್ಧತಿ ಎಲ್ಲ ದೇಶಗಳಲ್ಲಿ ಕಂಡುಬರುವ ಸಮಸ್ಯೆಯಾಗಿದೆ. ಬಹುತೇಕ ವೇಶ್ಯೆಯರು ಆ ವೃತ್ತಿಗೆ ಬಲವಂತವಾಗಿ ದೂಡಲ್ಪಟ್ಟವರೇ. ಅತ್ಯಂತ ಕೀಳಾಗಿ ಅವರನ್ನು ನೋಡುವ ಸಮಾಜ ಅವರು ಆ ಸ್ಥಿತಿಗೆ ಬರಲು ಇರಬಹುದಾದ ಕಾರಣಗಳ ಬಗ್ಗೆ ಜಾಣ ಕುರುಡು ವ್ಯಕ್ತಪಡಿಸುವುದನ್ನು ಕಾಣಬಹುದು. ಅವರೂ ಮನುಷ್ಯರು ಅವರಿಗೂ ಮನಸ್ಸಿದೆ ಎಂಬುದನ್ನು ಅರಿತು ಅವರ ಅಂತರಂಗದ ತುಮುಲಗಳನ್ನು ನಾವು ಗುರುತಿಸಬೇಕಿದೆ. ಅವರ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಕಾರ್ಯ ಇಂದು ಆಗಬೇಕಿದೆ. ಸಾಹಿತ್ಯ ವಲಯದಲ್ಲಿ ಈ ಬಗೆಯ ಅಲಕ್ಷಿತ ವರ್ಗದ ಮಹಿಳೆಯರ ಅಂತರಂಗದ ಚಿತ್ರಣವನ್ನು ಕಟ್ಟಿಕೊಡುವ ಕಾರ್ಯ ಸಾಕಷ್ಟು ನಡೆಯುತ್ತಿರುವುದು ಸಂತೋಷದ ವಿಷಯ. ಜಗತ್ತಿನಾದ್ಯಂತ ಈ ಬಗೆಯ ಚರ್ಚೆ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿಯೂ ಸ್ಥಾನ ಪಡೆದಿದ್ದು, ಪ್ರಭಾವೀ ಮಾಧ್ಯಮವಾದ ನಾಟಕ ಪ್ರಕಾರದಲ್ಲಿಯೂ ಈ ಬಗೆಯ ಪಾತ್ರಚಿತ್ರಣಗಳು ದಾಖಲಾಗಿರುವುದನ್ನು ಗಮನಿಸಬಹುದು. ಇಂತಹ ವಸ್ತುವನ್ನು ತೆಗೆದುಕೊಂಡು ನಿರ್ವಹಿಸಿರುವ ಬಗೆಯನ್ನು ಅಧ್ಯಯನಕ್ಕೊಳಪಡಿಸಲು ಕನ್ನಡದ ಬಹು ಮುಖ್ಯ ನಾಟಕಕಾರರಾದ ಚಂದ್ರಶೇಖರ ಕಂಬಾರರು ಮತ್ತು ಜರ್ಮನಿಯ ಪ್ರಸಿದ್ಧ ನಾಟಕಕಾರರಾದ ಬರ್ಟೋಲ್ಟ್ ಬ್ರೆಕ್ಟ್ ಇವರಿಬ್ಬರ ನಾಟಕಗಳಲ್ಲಿ ಚಿತ್ರಿತವಾಗಿರುವ ವೇಶ್ಯೆಯರ ಪಾತ್ರಚಿತ್ರಣವನ್ನು ಕುರಿತು ಇಲ್ಲಿ ತೌಲನಿಕವಾಗಿ ನೋಡಲಾಗಿದೆ.

ವೇಶ್ಯಾವೃತ್ತಿಯಲ್ಲಿರುವ ಸ್ತ್ರೀಯರ ಜೀವನ ಶೈಲಿ, ಅವರ ಕಷ್ಟ–ನಷ್ಟಗಳು ಹಾಗೂ ಸಾಮಾಜಿಕವಾಗಿ ಅದೊಂದು ಪಿಡುಗಾಗಿ ರೂಪುಗೊಂಡಿರುವ ಕ್ರಮಗಳನ್ನು ಕಂಬಾರರು ತಮ್ಮ ಹಲವು ನಾಟಕಗಳಲ್ಲಿ ಚಿತ್ರಿಸಿದ್ದಾರೆ. ಇವರ ‘ಶಿವರಾತ್ರಿ’, ‘ಋಷ್ಯಶೃಂಗ’, ‘ಜೋಕುಮಾರಸ್ವಾಮಿ’, ‘ನಾಯೀಕತೆ’, ‘ಭಾರತಾಂಬೆ’ ‘ಹರಕೆಯ ಕುರಿ’ ಮುಂತಾದ ನಾಟಕಗಳಲ್ಲಿ ಈ ಬಗೆಯ ಚಿತ್ರಣಗಳನ್ನು ನಾವು ಕಾಣಬಹುದು.

ಪಶ್ಚಿಮದ ಸಂದರ್ಭದಲ್ಲಿ ‘ಎಪಿಕ್ ರಂಗಭೂಮಿ’ ಎಂಬ ತನ್ನ ವಿಶಿಷ್ಟ ಸಿದ್ಧಾಂತದ ಮೂಲಕ ಹೆಸರಾಗಿರುವ ಜರ್ಮನಿಯ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ರ ನಾಟಕಗಳಲ್ಲೂ ನಾವು ಈ ಬಗೆಯ ಅಲಕ್ಷಿತ, ಲೈಂಗಿಕ ದಾಸ್ಯದ ಮಹಿಳೆಯರ ಪಾತ್ರಚಿತ್ರಣಗಳನ್ನು ಗಮನಿಸಬಹುದು. ಇವರ ‘ದಿ ಗುಡ್ ವುಮನ್ ಆಫ್ ಸೆಜುವಾನ್’, (ಕನ್ನಡಕ್ಕೆ: ‘ಧರ್ಮಪುರಿಯ ದೇವದಾಸಿ’–ಲಿಂಗದೇವರು ಹಳೆಮನೆ), ‘ತ್ರೀ ಪೆನ್ನಿ ಅಪೆರ’(ಕನ್ನಡಕ್ಕೆ: ‘ಮೂರು ಕಾಸಿನ ಸಂಗೀತ ನಾಟಕ’–ಕೆ.ವಿ.ಸುಬ್ಬಣ್ಣ), ‘ಮದರ್ ಕರೇಜ್’(ಕನ್ನಡಕ್ಕೆ: ‘ಮದರ್ ಕರೇಜ್’–ಲಿಂಗದೇವರು ಹಳೆಮನೆ), ‘ಮ್ಯಾನ್ ಈಸ್ ಮ್ಯಾನ್’ (ಕನ್ನಡಕ್ಕೆ: ‘ಮನುಷ್ಯ ಅಂದ್ರೆ ಮನುಷ್ಯಾನೆ’–ಲಿಂಗದೇವರು ಹಳೆಮನೆ) ಮುಂತಾದ ನಾಟಕಗಳಲ್ಲಿ ಈ ಬಗೆಯ ಪಾತ್ರಚಿತ್ರಣಗಳನ್ನು ಗುರುತಿಸಬಹುದಾಗಿದೆ.

ಕಂಬಾರರ ‘ಶಿವರಾತ್ರಿ’ ನಾಟಕದಲ್ಲಿ ನಾವು ವೇಶ್ಯಾವೃತ್ತಿಯವರಲ್ಲೂ ಇರಬಹುದಾದ ಸಾತ್ವಿಕತೆ ಹಾಗೂ ಕಾಯಕನಿಷ್ಠೆಯನ್ನು ಗುರುತಿಸಬಹುದು. ಜೀವನ ನಿರ್ವಹಣೆಗಾಗಿ ವೇಶ್ಯಾವೃತ್ತಿಯಲ್ಲಿದ್ದರೂ ಪ್ರಾಮಾಣಿಕತೆಯಿಂದ ಕಾಯಕ ತತ್ವವನ್ನು ಪಾಲಿಸುತ್ತಿರುವ ಸಾವಂತ್ರಿ ಹಾಗೂ ಅವಳ ಸಹವೇಶ್ಯೆಯರು ದುರಾಸೆಗೆ ಬಲಿ ಬೀಳದೆ ಆತ್ಮತೃಪ್ತಿಗಾಗಿ ಹಾಗೂ ವೃತ್ತಿಧರ್ಮಕ್ಕನುಗುಣವಾಗಿ ಕೆಲಸ ಮಾಡುವ ಚಿತ್ರಣಗಳನ್ನು ನಾವು ಈ ನಾಟಕದಲ್ಲಿ ಕಾಣುತ್ತೇವೆ. ನಾಟಕದ ಸನ್ನಿವೇಶವೊಂದರಲ್ಲಿ ‘ಸೂಳೆತನವನ್ನೂ ಸಮರ್ಥಿಸಿಕೊಳ್ಳಲು ನಿನಗೆ ನಾಚಿಕೆಯಾಗುವುದಿಲ್ಲವೇ’ ಎಂದು ಬಿಜ್ಜಳ ಕೋಪದಿಂದ ಸಾವಂತ್ರಿಯನ್ನು ಪ್ರಶ್ನಿಸುತ್ತಾನೆ. ಆಗ ಸಾವಂತ್ರಿ “ಶ್ರೀಮಂತನೊಬ್ಬ ಕದ್ದ ಹಣದಿಂದ ಶ್ರೀಮಂತನಾದ ಬಗ್ಗೆ ಕೊಚ್ಚಿಕೊಂಬಾಗ, ಜನರನ್ನ ಕೊಂದು ರಾಜನಾದವನು, ತನ್ನ ವಿಜಯಗಳ ಬಗ್ಗೆ ಕೊಚ್ಚಿಕೊಂಬಾಗ, ಭ್ರಷ್ಟಾಚಾರದಿಂದ ಮೇಲೇರಿದ ಅಧಿಕಾರಿ ತನ್ನ ಅಧಿಕಾರದ ಬಗ್ಗೆ ಕೊಚ್ಚಿಕೊಂಬಾಗ–ನಾಚಿಕೊಳ್ಳುವರೇ ಸ್ವಾಮಿ? ಇವರೇ ನಾಚಿಕೊಳ್ಳದೆ ಇರುವಾಗ, ಕಾಯಕ ಅಂತ ಮೈಮಾರಿ ಪ್ರಾಮಾಣಿಕವಾಗಿ ಗಳಿಸಿದ ಹಣದಲ್ಲಿ ತೆರಿಗೆ ಕಟ್ಟುವ ನಾವು ಯಾಕೆ ನಾಚಿಕೊಳ್ಳಬೇಕು?”[೧] ಎಂದು ಮಾರ್ಮಿಕವಾಗಿ ಉತ್ತರಿಸುತ್ತಾಳೆ. ಸಾವಂತ್ರಿಯ ಈ ಮಾತುಗಳಲ್ಲಿ ನಾವು ವೃತ್ತಿಸಮರ್ಥನೆಯನ್ನು, ಭ್ರಷ್ಟ ಸಮಾಜದ ಚಿತ್ರಣವನ್ನು ಹಾಗೂ ಪ್ರಾಮಾಣಿಕ ದುಡಿಮೆಯ ಮಹತ್ವವನ್ನು ಗುರುತಿಸಬಹುದು.

ಬ್ರೆಕ್ಟ್‌ರ ‘ಧರ್ಮಪುರಿಯ ದೇವದಾಸಿ’ ನಾಟಕದಲ್ಲೂ ದೇವದಾಸಿ ವೃತ್ತಿಯ ಕಲ್ಯಾಣಿಯು ಭೂಲೋಕಕ್ಕೆ ಬಂದ ದೇವರುಗಳಿಂದ ‘ಒಳ್ಳೆಯ ವ್ಯಕ್ತಿ’ ಎಂದು ಆಯ್ಕೆಯಾಗುವುದನ್ನು ಗಮನಿಸಬಹುದು. ಇಲ್ಲಿಯೂ ಕೂಡ ದೇವದಾಸಿ ಕಲ್ಯಾಣಿಯ ಒಳ್ಳೆಯ ಗುಣಗಳನ್ನು ಪರಿಚಯಿಸುವುದರ ಜೊತೆಗೆ ಅವಳನ್ನು ಆ ವೃತ್ತಿಗೆ ದೂಡಿದ ಬಡತನವನ್ನು, ಬೇರೆ ವೃತ್ತಿ ಮಾಡಿ ಗೌರವಯುತವಾಗಿ ಬದುಕು ಕಟ್ಟಿಕೊಳ್ಳಬೇಕೆಂಬ ಅವಳ ಬಯಕೆಯನ್ನು, ಎಲ್ಲರಂತೆ ತಾನೂ ಮದುವೆಯಾಗಿ ಒಬ್ಬ ಗಂಡಸಿನೊಂದಿಗೆ ಬದುಕಬೇಕೆಂಬ ಅವಳ ಆಸೆಯನ್ನು ಬ್ರೆಕ್ಟ್ ಚಿತ್ರಿಸಿದ್ದಾರೆ. ‘ಚಕ್ರವರ್ತಿಯ ಹುಟ್ಟಿದ ಹಬ್ಬದ ದಿನಾನೂ ನಮ್ಮ ಹೊಟ್ಟೆ ತಾಳ ಹಾಕ್ತಾ ಇರುತ್ತೆ’ ಎಂದು ಕಲ್ಯಾಣಿ ನೀರಿನ ವ್ಯಾಪಾರಿ ಚಂಡಿಲನಿಗೆ ಹೇಳುವಲ್ಲಿ ವೇಶ್ಯಾವೃತ್ತಿಯಲ್ಲಿದ್ದರೂ ಸಹ ತಮ್ಮ ಹೊಟ್ಟೆಪಾಡಿಗಾಗಿ ಪರದಾಡಬೇಕಾದ ಅವರ ಆರ್ಥಿಕ ದುಸ್ಥಿತಿಯನ್ನು ತಿಳಿಯಬಹುದಾಗಿದೆ. ಮುಂದೆ ದೇವರುಗಳಿಂದಾಗಿ ತನಗೆ ಹಣ ದೊರೆಯುತ್ತಿದ್ದಂತೆ ಕಲ್ಯಾಣಿ ದೇವದಾಸಿ ವೃತ್ತಿಯನ್ನು ಕೈಬಿಟ್ಟು ಅಂಗಡಿಯೊಂದನ್ನು ಬಾಡಿಗೆ ಪಡೆದು ತಂಬಾಕಿನ ವ್ಯಾಪಾರವನ್ನು ಪ್ರಾರಂಭಿಸುತ್ತಾಳೆ. ಆದರೂ ಅಂಗಡಿಯ ಒಡತಿ ಶಾಂಭವಿ, ಕಲ್ಯಾಣಿಯನ್ನು ಅನುಮಾನದಿಂದ ನೋಡುವುದನ್ನು ಬಿಡುವುದಿಲ್ಲ. ಹೀಗೆ ಒಬ್ಬ ವೇಶ್ಯೆ ತನ್ನ ವೃತ್ತಿಯನ್ನು ಕೈಬಿಟ್ಟು ಮುಖ್ಯವಾಹಿನಿಗೆ ಬಂದಾಗಲೂ ಸಮಾಜ ಅವಳನ್ನು ಅನುಮಾನದಿಂದ ನೋಡುವುದು ಈ ವೃತ್ತಿಯವರ ಪುನರ್ವಸತಿಯ ನಂತರವೂ ಬರಬಹುದಾದ ಸಮಸ್ಯೆಗಳಿಗೆ ಸಾಕ್ಷಿಯಂತಿದೆ.

ಆಕಸ್ಮಿಕವಾಗಿಯೋ ಅಥವಾ ಹೊಟ್ಟೆ ಪಾಡಿಗಾಗಿಯೋ ಈ ವೃತ್ತಿಗೆ ಬಂದ ವೇಶ್ಯೆಯರನ್ನು ಸಮಾಜ ತುಚ್ಛವಾಗಿ ಕಾಣುವುದರಿಂದ ಅವರಲ್ಲೂ ತಾವು ಕೀಳು ಎಂಬ ಭಾವನೆ ಬೇರೂರಿಬಿಟ್ಟಿದೆ. ‘ಜೋಕುಮಾರಸ್ವಾಮಿ’ ನಾಟಕದಲ್ಲಿ ಗೌಡ್ತಿ, ಸೂಳಿ ಶಾರಿಯ ಮನೆಗೆ ಬಂದು ‘ತಾಯಿ’ ಎಂದು ಕೂಗಿದಾಗ “ಕೀಳ ಸೂಳಿಗಿ ನಾಯೀ ಅಂತ ಕರೆಯೋದ ಬಿಟ್ಟ ತಾಯೀ ಅಂತಿ. ಯಾರವ್ವಾ ನೀನು?”[೨] ಎಂದು ಶಾರಿ ಕೇಳುತ್ತಾಳೆ. ಇಲ್ಲಿ ವ್ಯವಸ್ಥೆ ಅವರ ಮನಸ್ಥಿತಿಯ ಮೇಲೆ ಎಂತಹ ಪರಿಣಾಮ ಬೀರಿದೆ ಎಂಬುದನ್ನು ಗಮನಿಸಬಹುದು. ಇಂತಹ ನೋವುಗಳ ನಡುವೆ ಬದುಕುವ ಅವರಿಗೆ ಆ ವೃತ್ತಿಯಲ್ಲಿಯೂ ನೆಮ್ಮದಿಯಾಗಿ ಬದುಕುವಷ್ಟು ಸೌಲಭ್ಯಗಳು ಸಿಗುವುದಿಲ್ಲ. ಕೆಲವೊಮ್ಮೆ ಗಿರಾಕಿಗಳನ್ನು ತಾವೇ ಹುಡುಕಬೇಕಾದ ಪರಿಸ್ಥಿತಿಯೂ ಬರುತ್ತದೆ. ನಾಟಕದಲ್ಲಿ ಶಾರಿ ಗಿರಾಕಿಗಳನ್ನು ಆಕರ್ಷಿಸುವ ಉದ್ದೇಶದಿಂದ ಜೋಕುಮಾರಸ್ವಾಮಿಯನ್ನು ಹೊತ್ತು ತರುವುದು ಈ ಎಲ್ಲ ಅರ್ಥಗಳ ಸೂಚಕದಂತಿದೆ. ಪರಿಸ್ಥಿತಿ ಹೀಗಿದ್ದರೂ ಮಕ್ಕಳಿಲ್ಲದ ಗೌಡ್ತಿ ಜೋಕುಮಾರಸ್ವಾಮಿಗಾಗಿ ಬೇಡಿಕೊಂಡಾಗ ಶಾರಿ ಅದನ್ನು ಗೌಡ್ತಿಗೆ ಕೊಡುತ್ತಾಳೆ. ಇಲ್ಲಿ ಶಾರಿ ತನ್ನ ಅವಶ್ಯಕತೆಯನ್ನು ಮರೆತು ಗೌಡ್ತಿಯ ಸಂತೋಷಕ್ಕಾಗಿ ಜೋಕುಮಾರಸ್ವಾಮಿಯನ್ನು ಕೊಡುವಲ್ಲಿ ನಾವು ವೇಶ್ಯಾವೃತ್ತಿಯವಳಲ್ಲೂ ಇರುವ ಕರಗುವ ಮನಸ್ಸನ್ನು, ತ್ಯಾಗ ಮನೋಭಾವವನ್ನು ಗುರುತಿಸಬಹುದಾಗಿದೆ.

ಭಾರತದಂತಹ ಹಲವಾರು ಜಾತಿಗಳಿರುವ ದೇಶದಲ್ಲಿ ವೇಶ್ಯಾವೃತ್ತಿಯು ಕೆಲವೊಂದು ಜಾತಿಗಳೊಂದಿಗೆ ಮಾತ್ರ ಹೆಚ್ಚಾಗಿ ತಳುಕು ಹಾಕಿಕೊಂಡಿರುವುದನ್ನು ಕಾಣಬಹುದು. ಕಂಬಾರರ ನಾಟಕಗಳಲ್ಲೂ ನಾವು ಈ ಬಗೆಯ ಚಿತ್ರಣಗಳನ್ನು ಗುರುತಿಸಬಹುದಾಗಿದೆ. ‘ಋಷ್ಯಶೃಂಗ’ ನಾಟಕದಲ್ಲಿ ಸೂಳೆಯರ ಪಾತ್ರದಲ್ಲಿ ಹೊಲೇರ ನಿಂಗಿ, ಹೊಲೇರ ಕಮಲಿ, ಹೊಲೇರ ಪಾರಿ, ಹೊಲೇರ ಯಮನಿ, ಹೊಲೇರ ಸೀತಿ ಹೀಗೆ ಬರೀ ಕೆಳವರ್ಗದ ಸ್ತ್ರೀಯರನ್ನು ಚಿತ್ರಿಸಲಾಗಿದೆ. ಈ ಮೂಲಕ ಕಂಬಾರರು ಸಮಾಜ ಹೇಗೆ ಕೆಳವರ್ಗದ ಸ್ತ್ರೀಯರನ್ನು ಬಲಿಪಶುಮಾಡಿ ಅದೊಂದು ಸಾಂಪ್ರದಾಯಿಕ ಶೋಷಣೆಯ ಆಚರಣೆಯಾಗಿ ಉಳಿಯುವಂತೆ ಮಾಡಿದೆ ಎಂಬುದನ್ನು ತೋರಿಸಿದ್ದಾರೆ. ಹಾಗೆಯೇ ‘ಜೋಕುಮಾರಸ್ವಾಮಿ’ ನಾಟಕದಲ್ಲಿ ಬರುವ ಹೊಲೇರ ಸೂಳಿ ಶಾರಿಯ ಪಾತ್ರವೂ ಇದನ್ನೇ ಸೂಚಿಸುತ್ತದೆ. ‘ನಾಯೀಕತೆ’ ನಾಟಕದಲ್ಲಿ ಬರುವ ಶಾರಿಯ ತಾಯಿ ಸಾವಂತ್ರಿ “ದಾಸರ ಕುಲದಾಗ ಸೂಳಿ ಅಂದರೂ ಒಂಥ, ಗರತಿ ಅಂದರೂ ಒಂಥ”[೩] ಎಂದು ಹೇಳುತ್ತಾಳೆ. ‘ಭಾರತಾಂಬೆ’ ನಾಟಕದಲ್ಲಿ ಶೆಟ್ಟಿ, ಬಂಗಾರಿಯ ತಾಯಿ ರಾಮಕ್ಕನಿಗೆ “ಅವರು ಕೆಡಿಸಿಲ್ಲ, ಒಂದು ವೇಳೆ ಕೆಡಿಸಿದರು ಅನ್ನೋಣ. ಯಾರನ್ನ ಕೆಡಿಸಿದರು? ಹೊಲತೀನ್ನ! ಹೊಲತೇರ್ನ ಯಾರಾದರೂ ಕೆಡಿಸ್ತಾರ? ರೊಕ್ಕಾ ಕೊಡತಾರ ಮಲಗತಾರ, ಅಷ್ಟೆ.”[೪] ಎಂದು ಹೇಳುತ್ತಾನೆ. ಈ ಎಲ್ಲಾ ಸಂದರ್ಭಗಳಲ್ಲಿಯೂ ನಾವು ಕೆಳಜಾತಿಯ ಮಹಿಳೆಯರನ್ನು ವೇಶ್ಯಾವೃತ್ತಿಯೊಂದಿಗೆ ತಳುಕು ಹಾಕಿರುವುದನ್ನು ಗಮನಿಸಬಹುದಾಗಿದೆ.

ಬ್ರೆಕ್ಟ್‌ರ ‘ಮೂರು ಕಾಸಿನ ಸಂಗೀತ ನಾಟಕ’ದಲ್ಲಿ ಮ್ಯಾಕ್ ಹೀತ್ ಎಂಬ ದರೋಡೆಕೋರ ಪ್ರಮುಖ ಪಾತ್ರಧಾರಿ. ಅವನ ಹೆಂಡತಿ ಜೆನ್ನಿ ಜೆನ್ನಿ ಒಬ್ಬ ವೇಶ್ಯೆ. ಆದರೆ ಇವರಿಬ್ಬರೂ ಮದುವೆಯಾದಾಗ ಈ ವೃತ್ತಿಗಳಲ್ಲಿರಲಿಲ್ಲ. ಭಾರೀ ಬಡತನದ ಕಾರಣ ಹೊಟ್ಟೆಪಾಡಿಗಾಗಿ ಮ್ಯಾಕ್ ತನ್ನ ಹೆಂಡತಿಯನ್ನು ವೇಶ್ಯಾವೃತ್ತಿಗೆ ತಳ್ಳುತ್ತಾನೆ. ಮುಂದೆ

ಈ ವೃತ್ತಿಯಿಂದಲೂ ತಮ್ಮಿಬ್ಬರ ಹೊಟ್ಟೆ ಹೊರೆಯಲು ಸಾಧ್ಯವಿಲ್ಲವೆಂದು ತಿಳಿದಾಗ ತಾನೂ ದರೋಡೆ, ಕಳ್ಳತನದಂತಹ ಕೆಲಸಕ್ಕೆ ಇಳಿಯುತ್ತಾನೆ. ಇಲ್ಲಿ ಜೆನ್ನಿಗೆ ತನ್ನನ್ನು ಸರಿಯಾಗಿ ಬಾಳಿಸದ, ದುಡಿದು ತಿನ್ನುವ ಪರ್ಯಾಯ ವಿಧಾನವನ್ನು ಕಂಡುಕೊಳ್ಳದ, ಹಣ ಸಿಕ್ಕ ನಂತರವೂ ತನ್ನನ್ನು ವೇಶ್ಯಾವೃತ್ತಿಯಿಂದ ಹೊರತರದ ಗಂಡನ ಮೇಲೆ ಒಂದು ಸಾತ್ವಿಕ ಸಿಟ್ಟು ಇರುತ್ತದೆ. ಹಾಗಾಗಿ ತನ್ನ ಗಂಡ ವೇಶ್ಯೆಯರ ಮನೆಗೆ ಬಂದಾಗ ತಾನೇ ಪೋಲೀಸರಿಗೆ ಸುಳಿವು ಕೊಟ್ಟು ಹಿಡಿದುಕೊಡುತ್ತಾಳೆ. ಇಲ್ಲಿ ಒಂದು ಬಡ ಕುಟುಂಬ ಅಸಹಾಯಕತೆಯಿಂದ ಅಡ್ಡಹಾದಿ ಹಿಡಿಯುವಲ್ಲಿ ವ್ಯವಸ್ಥೆ ಹೇಗೆ ಕಾರಣವಾಗಿದೆ, ಆರ್ಥಿಕ ಅಸಮಾನತೆ ಹೇಗೆ ಒಂದು ಸಂಸಾರವನ್ನು ಛಿದ್ರಗೊಳಿಸುತ್ತದೆ ಎಂಬ ಸೂಕ್ಷ್ಮ ಒಳನೋಟಗಳನ್ನು ನಾವು ಕಾಣಬಹುದು. ಹೀಗೆ ಬ್ರೆಕ್ಟ್ ಜರ್ಮನಿಯ ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು, ಆರ್ಥಿಕ ಅಸಮಾನತೆಯನ್ನು ಹಾಗೂ ಅಸಮ ಸಮಾಜದ ನ್ಯೂನತೆಗಳನ್ನು ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿರುವುದನ್ನು ಗಮನಿಸಬಹುದಾಗಿದೆ.

ಕಂಬಾರರ ‘ಹರಕೆಯ ಕುರಿ’ ನಾಟಕದಲ್ಲಿ ವೇಶ್ಯೆಯ ಪಾತ್ರಚಿತ್ರಣ ಇಲ್ಲದಿದ್ದರೂ ‘ವೇಶ್ಯೆ’ ಎಂಬ ಪದವನ್ನು ಒಂದು ಬೆದರಿಕೆಯ ತಂತ್ರವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ರಾಜಕಾರಣಿಗಳು ಜನಸಾಮಾನ್ಯರನ್ನು ತಮ್ಮ ಸ್ವಾರ್ಥಕ್ಕಾಗಿ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದು ಈ ನಾಟಕದ ವಸ್ತುವಾಗಿದೆ. ಇಲ್ಲಿ ರುದ್ರಪ್ಪನೆಂಬ ರಾಜಕಾರಣಿ ತನ್ನ ಸ್ವಾರ್ಥಕ್ಕಾಗಿ ಸರೋಜ ಎಂಬ ಮಧ್ಯಮವರ್ಗದ ಸಂಪ್ರದಾಯಸ್ಥ ಗೃಹಿಣಿಯನ್ನು ವೇಶ್ಯೆಯಂತೆ ಬಿಂಬಿಸಿ, ತಾನು ರಾಜಕೀಯವಾಗಿ ಲಾಭ ಪಡೆಯಲು ಯತ್ನಿಸುತ್ತಾನೆ. ಇಲ್ಲಿ ತನ್ನ ಕುತಂತ್ರದಿಂದ ಆ ಮಹಿಳೆಯ ಮೇಲಾದ ಪರಿಣಾಮ ಎಷ್ಟು ಘೋರವಾದದ್ದು ಎಂಬುದು ಅವನಿಗೆ ಮುಖ್ಯವಾಗುವುದಿಲ್ಲ. ಆದರೆ ಈ ಬಗೆಯ ಅಪವಾದದಿಂದ ಆ ದಂಪತಿಗಳ ನಡುವೆ ದೊಡ್ಡ ಬಿರುಕೇ ಉಂಟಾಗುತ್ತದೆ. ಇಂತಹ ಆಕಸ್ಮಿಕ ಘಟನೆಗಳು ಎಷ್ಟೋ ವೇಳೆ ದುರಂತದಲ್ಲಿ ಅಂತ್ಯವಾಗಿ ಅನೇಕ ಗೌರವಸ್ಥ ಕುಟುಂಬದ ಮಹಿಳೆಯರ ಬಲಿ ಪಡೆದಿರುವುದನ್ನು ನಾವು ಕಾಣುತ್ತಿದ್ದೇವೆ. ಪ್ರಸ್ತುತ ನಾಟಕವು ಸ್ತ್ರೀಯರ ಮಡಿವಂತಿಕೆಯಲ್ಲಿನ ಸೂಕ್ಷ್ಮತೆಯನ್ನು, ಅದನ್ನೇ ದಾಳವಾಗಿ ಬಳಸಿಕೊಂಡು ಶೋಷಿಸಲು ಯತ್ನಿಸುವ ಸಮಾಜವನ್ನು ಹಾಗೂ ಇಂತಹ ಸಂದಿಗ್ಧತೆಗೆ ಸಿಲುಕುವ ಹೆಣ್ಣುಮಕ್ಕಳ ನೋವನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ.

ಬ್ರೆಕ್ಟ್‌ರ ‘ಮನುಷ್ಯ ಅಂದ್ರೆ ಮನುಷ್ಯಾನೆ’ ಮತ್ತು ‘ಮದರ್ ಕರೇಜ್’ ನಾಟಕಗಳು ಯುದ್ಧದ ಭೀಕರತೆಯನ್ನು ಹಾಗೂ ಅದು ಜನಸಾಮಾನ್ಯರ ಮೇಲೆ ಬೀರುವ ಪರಿಣಾಮಗಳನ್ನು ಚಿತ್ರಿಸುವ ನಾಟಕಗಳಾಗಿವೆ. ಎರಡೂ ನಾಟಕಗಳಲ್ಲಿ ಸಮರ ಭೂಮಿಯಲ್ಲಿ ವ್ಯಾಪಾರವನ್ನು ನಿರ್ವಹಿಸುತ್ತಾ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಮಹಿಳೆಯರನ್ನು ಕಾಣುತ್ತೇವೆ. ಸೈನ್ಯದೊಳಗೆ ವ್ಯಾಪಾರ ಮಾಡಬೇಕಾದ ಹೆಂಗಸು ತನ್ನ ಪಾತಿವ್ರತ್ಯವನ್ನು ಉಳಿಸಿಕೊಳ್ಳುವುದು ಎಷ್ಟು ಕಷ್ಟ ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ಜೀವನ ನಿರ್ವಹಣೆಗಾಗಿ ಇವರು ತಮ್ಮದೇ ಆದ ಒಂದು ವೃತ್ತಿಯನ್ನು ಅನುಸರಿಸುತ್ತಿದ್ದರೂ ಸನ್ನಿವೇಶದ ಬಲಿಪಶುಗಳಾಗಿ ಅಥವಾ ತಮ್ಮ ವ್ಯಾಪಾರಕ್ಕೆ ಪೂರಕವಾಗಿ ಮುಕ್ತ ಲೈಂಗಿಕ ಜೀವನ ನಡೆಸುವುದನ್ನು ಕಾಣುತ್ತೇವೆ. ‘ಮನುಷ್ಯ ಅಂದ್ರೆ ಮನುಷ್ಯಾನೆ’ ನಾಟಕದಲ್ಲಿ ಬರುವ ಸೈನ್ಯದಲ್ಲಿ ಟ್ರ್ಯಾವೆಲಿಂಗ್ ಬಾರ್ ನಡೆಸುತ್ತಿರುವ ಮೇರಿ ಸುಂದ್ರಮ್ಮ ಮತ್ತು ಅವಳ ಮಗಳು ಜೆನ್ನಿಯಾಗಲಿ, ‘ಮದರ್ ಕರೇಜ್’ ನಾಟಕದಲ್ಲಿ ತನ್ನ ತಳ್ಳುಗಾಡಿಯ ಮೂಲಕ ಅಗತ್ಯ ಸಾಮಗ್ರಿಗಳನ್ನು ಮಾರುವ ಮದರ್ ಕರೇಜ್ ಆಗಲಿ, ವೃತ್ತಿಪರ ವೇಶ್ಯೆಯರಲ್ಲದಿದ್ದರೂ ಪರಿಸ್ಥಿತಿಯ ಬಲಿಪಶುಗಳಾಗಿ ಹಲವು ಗಂಡಸರೊಂದಿಗೆ ಸಂಪರ್ಕ ಹೊಂದಬೇಕಾಗಿಬರುವುದು ವೇಶ್ಯಾವೃತ್ತಿಯ ಆಚೆಗಿನ ಲೈಂಗಿಕ ಶೋಷಣೆಯನ್ನು, ಯುದ್ಧದ ದೌರ್ಜನ್ಯವನ್ನು, ಪರಿಸ್ಥಿತಿಯ ಒತ್ತಡವನ್ನು ಸೂಚಿಸುತ್ತದೆ. ಇಲ್ಲಿ ಈ ಎರಡೂ ನಾಟಕಗಳಲ್ಲಿ ಬರುವ ಸ್ತ್ರೀಯರು ಎರಡು ಮಹಾಯುದ್ಧಗಳ ಸಂದರ್ಭಗಳಲ್ಲಿ ಲೈಂಗಿಕ ದಾಸ್ಯಕ್ಕೆ ಒಳಗಾಗಿ ಅಪಾರ ಹಿಂಸೆಯನ್ನು ಅನುಭವಿಸಿದ ಲಕ್ಷಾಂತರ ಮಹಿಳೆಯರನ್ನು ಪ್ರತಿನಿಧಿಸುವಂತಿದ್ದಾರೆ. ಯುದ್ಧದ ಭೀಕರತೆಯನ್ನು ತಮ್ಮ ಹಲವಾರು ನಾಟಕಗಳಲ್ಲಿ ಚಿತ್ರಿಸಿರುವ ಬ್ರೆಕ್ಟ್ ಮೇರಿ ಸುಂದ್ರಮ್ಮ ಮತ್ತು ಮದರ್ ಕರೇಜ್‌ಳ ಪಾತ್ರದ ಮೂಲಕ ಸೂಚಿಸಿರುವುದು ಅದನ್ನೇ.

ವೇಶ್ಯಾವೃತ್ತಿಯು ಬಹುತೇಕ ಸಂದರ್ಭಗಳಲ್ಲಿ ವಂಶಪಾರಂಪರ್ಯವಾಗಿ ಮುಂದುವರಿಯುವ ಸಾಧ್ಯತೆಯಿರುತ್ತದೆ. ಆದರೆ ಕೆಲವರು ಆ ವೃತ್ತಿಯಲ್ಲಿ ತಾವು ಅನುಭವಿಸಿದ ಯಾತನೆ ತಮಗೇ ಕೊನೆಯಾಗಲಿ, ಅದು ನಮ್ಮ ಮಕ್ಕಳಿಗೆ ಬೇಡ ಎಂದು ಯೋಚಿಸಿ ಆ ವೃತ್ತಿಯಿಂದ ತಮ್ಮ ಮಕ್ಕಳನ್ನು ಪಾರು ಮಾಡಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸುತ್ತಾರೆ. ಈ ಎರಡೂ ಬಗೆಯ ಉದಾಹರಣೆಗಳು ನಮಗೆ ಕಂಬಾರ ಮತ್ತು ಬ್ರೆಕ್ಟ್ ಇವರಿಬ್ಬರ ನಾಟಕಗಳಲ್ಲೂ ಕಂಡುಬರುತ್ತವೆ. ಮುಂದೆ ತಮ್ಮ ಹೆಣ್ಣು ಮಕ್ಕಳನ್ನೂ ಈ ವೃತ್ತಿಗೆ ದೂಡುವ ಸೂಚನೆಯು ನಮಗೆ ‘ಋಷ್ಯಶೃಂಗ’ ನಾಟಕದ ಪಾರಿಯ ಮಗಳು ಕಮಲಿಯ ಪಾತ್ರದಲ್ಲಿ ಹಾಗೂ ‘ಮನುಷ್ಯ ಅಂದ್ರೆ ಮನುಷ್ಯಾನೆ’ ನಾಟಕದ ಮೇರಿ ಸುಂದ್ರಮ್ಮನ ಮಗಳು ಜೆನ್ನಿಯ ಪಾತ್ರದಲ್ಲಿ ದೊರೆಯುತ್ತವೆ. ಈ ವೃತ್ತಿಯಿಂದ ತಮ್ಮ ಮಕ್ಕಳು ದೂರ ಇರಬೇಕೆಂದು ಬಯಸುವ ಪಾತ್ರ ಚಿತ್ರಣ ನಮಗೆ ‘ಮದರ್ ಕರೇಜ್’ ನಾಟಕದ ಕರೇಜ್‌ಳ ಮಗಳು ಕ್ಯಾಥರೀನ್‌ಳ ಪಾತ್ರದಲ್ಲಿ ದೊರೆಯುತ್ತದೆ. ಹಾಗೆಯೇ ತಂದೆ ತಾಯಿಗಳೇ ಈ ವೃತ್ತಿಗೆ ದೂಡಲು ಪ್ರಯತ್ನಿಸಿದರೂ ಮಗಳೇ ಪ್ರತಿಭಟಿಸಿ ಆ ವಿಷವೃತ್ತದಿಂದ ಹೊರಬರುವ ಚಿತ್ರಣ ‘ನಾಯೀಕತೆ’ ನಾಟಕದ ಶಾರಿ ಪಾತ್ರದಲ್ಲಿ ದೊರೆಯುತ್ತದೆ.

ವೇಶ್ಯಾವೃತ್ತಿ ಎಂಬುದು ಭಾರತೀಯ ಹಾಗೂ ಯೂರೋಪಿನ ಎರಡೂ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಕಂಡುಬಂದರೂ ಆ ವೃತ್ತಿಯನ್ನು ನೋಡುವ, ಸ್ವೀಕರಿಸುವ ದೃಷ್ಟಿಕೋನಗಳಲ್ಲಿ ಭಿನ್ನತೆ ಇದೆ. ಭಾರತೀಯ ಸಂದರ್ಭದಲ್ಲಿ ಈ ವೃತ್ತಿಗೆ ಬರಲು ಇರಬಹುದಾದ ಕಾರಣಗಳು, ಈ ವೃತ್ತಿಯಲ್ಲಿನ ಅವರ ಸ್ಥಿತಿಗತಿ, ಈ ವೃತ್ತಿಯಿಂದ ಹೊರಬಂದು ಹೊಸ ಜೀವನ ನಡೆಸಲು ಇರುವ ಅವಕಾಶಗಳು ಯೂರೋಪಿನ ಸಂದರ್ಭಕ್ಕಿಂತ ಭಿನ್ನವಾಗಿವೆ. ಇಲ್ಲಿ ಈ ಬಗೆಯ ಶೋಷಿತರ ವೃತ್ತಿಬದಲಾವಣೆಗೆ ಅವಕಾಶಗಳು ಕಡಿಮೆ. ಕೆಲವು ಸರ್ಕಾರಿ ಹಾಗೂ ಸ್ವಯಂ-ಸೇವಾಸಂಸ್ಥೆಗಳಡಿಯಲ್ಲಿ ಮಾತ್ರ ಈ ಬಗೆಯ ಪುನರ್ವಸತಿಯ ಪ್ರಯತ್ನಗಳು ಅಲ್ಪ ಪ್ರಮಾಣದಲ್ಲಿ ನಡೆಯುತ್ತಿವೆ. ಹಳ್ಳಿಗಳಲ್ಲಿ ವೇಶ್ಯಾವೃತ್ತಿ ಕೆಲವೊಮ್ಮೆ ವಂಶಪಾರಂಪರ್ಯವಾಗಿಯೂ ಉಳಿದು ಬಿಡುವ ಅಪಾಯವಿದೆ. ಭಾರತದ ಹಲವು ರಾಜ್ಯಗಳಲ್ಲಿ ಹಾಗೂ ಕರ್ನಾಟಕದ ಉತ್ತರ ಭಾಗದಲ್ಲಿ ಇನ್ನೂ ಜೀವವಂತವಾಗಿರುವ ‘ದೇವದಾಸಿ ಪದ್ಧತಿ’ ಇದಕ್ಕೊಂದು ಸ್ಪಷ್ಟ ನಿದರ್ಶನವಾಗಿದೆ. ಎಷ್ಟೋ ವೇಳೆ ಇಲ್ಲಿನ ದೇವದಾಸಿಯರ ಮಕ್ಕಳಿಗೆ ತಮ್ಮ ತಂದೆಯ ಹೆಸರೇ ತಿಳಿದಿರುವುದಿಲ್ಲ. ಆದರೆ ಯೂರೋಪಿನಲ್ಲಿ ವೃತ್ತಿಬದಲಾವಣೆಗೆ ಅವಕಾಶಗಳು ಅಲ್ಲಿನ ಸಂಸ್ಕೃತಿಯಲ್ಲಿ ಮುಕ್ತವಾಗಿರುತ್ತವೆ. ಅಲ್ಲಿ ಮುಕ್ತ ಲೈಂಗಿಕತೆ ಹಾಗೂ ವೇಶ್ಯಾವಾಟಿಕೆಯ ನಡುವೆ ತೀರಾ ತೆಳುವಾದ ವ್ಯತ್ಯಾಸವಿರುವುದನ್ನು ಗಮನಿಸಬಹುದಾಗಿದೆ.

ಒಟ್ಟಿನಲ್ಲಿ ಇಬ್ಬರೂ ನಾಟಕಕಾರರು ವೇಶ್ಯಾವೃತ್ತಿಗೆ ಹೆಣ್ಣು ಮಕ್ಕಳು ಬಲಿಯಾಗಲು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಗಳು ಕಾರಣವಾಗಿರುವ ಬಗ್ಗೆ ತಮ್ಮ ನಾಟಕಗಳಲ್ಲಿ

ಚಿತ್ರಿಸಿದ್ದಾರೆ. ಹಾಗೆಯೇ ತಮ್ಮ ವೃತ್ತಿಯ ಹೊರತಾಗಿಯೂ ಅವರಲ್ಲಿರುವ ಒಳ್ಳೆಯತನ, ಮಾನವೀಯತೆ ಮತ್ತು ಪ್ರಾಮಾಣಿಕತೆಯ ಬಗ್ಗೆಯೂ ಚಿತ್ರಿಸಿದ್ದಾರೆ. ಅವರೂ ಮನುಷ್ಯರು, ಅವರಿಗೂ ಆಸೆ–ಆಕಾಂಕ್ಷೆಗಳಿರುತ್ತವೆ ಎಂಬುದನ್ನು ಚಿತ್ರಿಸಿರುವ ಇಬ್ಬರೂ ಆ ವೃತ್ತಿಯಿಂದ ಅವರು ಹೊರಬರಲು ಪ್ರಯತ್ನಿಸುವ ಬಗೆಯನ್ನೂ ಚಿತ್ರಿಸಿದ್ದಾರೆ. ಜೊತೆಜೊತೆಯಲ್ಲೇ ಆ ವೃತ್ತಿಯು ಕೆಲವೊಮ್ಮೆ ವಂಶಪಾರಂಪರ್ಯವಾಗಿ ಉಳಿದುಬಿಡಬಹುದಾದ ಅಪಾಯದ ಬಗ್ಗೆಯೂ ಸೂಚಿಸಿದ್ದಾರೆ. ಇನ್ನು ಕಂಬಾರರ ನಾಟಕಗಳಲ್ಲಿ ಈ ವೃತ್ತಿಯನ್ನು 'ಊಳಿಗಮಾನ್ಯ ವ್ಯವಸ್ಥೆ'ಯ ಅಡಿಯಲ್ಲಿ, ಸಂಪ್ರದಾಯದ ಹೆಸರಿನಲ್ಲಿ ಹಾಗೂ ವಿಶೇಷವಾಗಿ ಕೆಳಜಾತಿಗಳ ಹಿನ್ನೆಲೆಯಲ್ಲಿ ನೋಡಲಾಗಿದ್ದು, ಆ ವೃತ್ತಿಯವರಲ್ಲೂ ಇರಬಹುದಾದ ಕಾಯಕನಿಷ್ಠೆ, ನೀತಿ–ನಿಯಮ ಹಾಗೂ ವೃತ್ತಿಗೌರವಗಳ ಬಗ್ಗೆ ಚಿತ್ರಿಸಲಾಗಿದೆ. ಬ್ರೆಕ್ಟ್ ನಾಟಕಗಳಲ್ಲಿ ಈ ವೃತ್ತಿಯನ್ನು ಆರ್ಥಿಕ ದುಸ್ಥಿತಿ ಹಾಗೂ ಯುದ್ಧದ ಸಮಸ್ಯೆಗಳಲ್ಲೊಂದಾಗಿ ತೋರಿಸಿರುವುದು ವಿಶೇಷವಾಗಿದೆ. ಇಬ್ಬರೂ ನಾಟಕಕಾರರು ತಮ್ಮ ನಾಟಕಗಳಲ್ಲಿ ವೇಶ್ಯೆಯರ ಬದುಕನ್ನು ಹಾಗೂ ಅವರ ಸಮಸ್ಯೆಗಳನ್ನು ಸಮಾಜವಾದದ ಹಿನ್ನೆಲೆಯಲ್ಲಿ ಗುರುತಿಸಿರುವುದನ್ನು ಗಮನಿಸಬಹುದು. ಹೀಗೆ ಎರಡು ಭಿನ್ನ ಸಂಸ್ಕೃತಿಗಳಲ್ಲಿನ ವೇಶ್ಯೆಯರ ಬದುಕಿನ ತುಮುಲಗಳನ್ನು, ಲೈಂಗಿಕ ವಿಚಾರದ ದೃಷ್ಟಿಕೋನದಲ್ಲಿನ ಸಾಮ್ಯತೆ–ಭಿನ್ನತೆಗಳನ್ನು ಹಾಗೂ ಸ್ವಸ್ಥ ಬದುಕಿನ ಸಾಧ್ಯತೆಗಳನ್ನು ಇವರಿಬ್ಬರ ನಾಟಕಗಳಲ್ಲಿಯೂ ಗುರುತಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು**

೧. ಶಿವರಾತ್ರಿ–ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ಬೆಂ, ಪ್ರ.ಮು–೧೯೮೧, ಪುಟ–೫೨

೨. ಜೋಕುಮಾರಸ್ವಾಮಿ– ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ಬೆಂ, ಪ್ರ.ಮು–೧೯೮೧, ಪುಟ–೩೨

೩. ನಾಯೀಕತೆ– ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ಬೆಂ, ಪ್ರ.ಮು–೧೯೮೧, ಪುಟ–೩೬

೪. ಜಕ್ಕಣ್ಣ ಮತ್ತು ಇತರ ಏಕಾಂಕ ನಾಟಕಗಳು– ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ, ಬೆಂ, ಪ್ರ.ಮು–೨೦೧೧, ಪುಟ–೫೪

**ಪರಾಮರ್ಶನ ಗ್ರಂಥಗಳು**

೧. ಚಂದ್ರಶೇಖರ ಕಂಬಾರ–ಸಂ: ಡಾ. ಹಾ.ಮಾ.ನಾಯಕ, ಡಾ.ಪ್ರಧಾನ್ ಗುರುದತ್ತ, ನವಕರ್ನಾಟಕ ಪ್ರಕಾಶನ, ಬೆಂ, ಪ್ರ.ಮು–೨೦೦೧

೨. ಬ್ರೆಕ್ಟ್–ಎಚ್.ಕೆ. ರಾಮಚಂದ್ರಮೂರ್ತಿ, ವಸಂತ ಪ್ರಕಾಶನ, ಬೆಂ, ಪ್ರ.ಮು–೧೯೭೮